# ಲಿಯಾಂಡರ್ 'ದಿ ಬೆಸ್ಟ್'

ವಿಂಬಲ್ಡನ್ ಟೆನಿಸ್‌ನಲ್ಲಿ ಈ ಸಲ ಭಾರತಕ್ಕೆ ಶುಕ್ರದೆಸೆ. ಒಂದೆಡೆ 'ಹಳೆಯ ಹುಲಿ' ಲಿಯಾಂಡರ್ ಪೇಸ್ ಮಿಕ್ಸೆಡ್ ಡಬಲ್ಸ್ (ಮಾರ್ಟಿನಾ ಹಿಂಗಿಸ್ ಜತೆಗೆ) ಪ್ರಶಸ್ತಿ ಗೆದ್ದರೆ, ಇನ್ನೊಂದೆಡೆ ಸಾನಿಯಾ ಮಿರ್ಜಾ ಮಹಿಳೆಯರ ಡಬಲ್ಸ್ ಪ್ರಶಸ್ತಿ ಗೆದ್ದರು. ಸುಮಿತ್ ನಗಾಲ್ ಜೂನಿಯರ್ ಡಬಲ್ಸ್ ಪ್ರಶಸ್ತಿ ಗೆದ್ದರು. ಮೂರೂ ಸ್ಮರಣಾರ್ಹ ದಾಖಲೆಗಳೇ. ಆದರೆ ಲಿಯಾಂಡರ್ ಸಾಧನೆ ಎಲ್ಲಕ್ಕಿಂತಲೂ ಮಿಗಿಲು. 43ರ ಹರೆಯದಲ್ಲಿ ತರುಣರನ್ನೂ ನಾಚಿಸುವಂತೆ ಕೋರ್ಟ್ ತುಂಬ ಚುರುಕಾಗಿ ಓಡಾಡುತ್ತಾ ಎದುರಾಳಿಗಳು ತತ್ತರಿಸುವಂತೆ ರಾಕೆಟ್ ಬೀಸುವ ಲಿಯಾಂಡರ್ ಆಟ ನೋಡುವುದೇ ಒಂದು ಸೊಗಸು. ತಮಗಿಂತ ಒಂದು ಸೀಡ್ ಮೇಲಿದ್ದ ಎದುರಾಳಿ ಜೋಡಿಯನ್ನು ಲಿಯಾಂಡರ್ ಮತ್ತು ಮಾರ್ಟಿನಾ ಹಿಂಗಿಸ್ ಫೈನಲ್‌ನಲ್ಲಿ ನೇರ ಸೆಟ್‌ಗಳಲ್ಲಿ ಬಗ್ಗುಬಡಿದದ್ದು ಒಂದು ವಿಸ್ಮಯದಂತೆ ಕಂಡುಬಂತು. ಲಿಯಾಂಡರ್‌ನ ಗೆಳೆಯರು ಭಾರತದಿಂದ 9 ಗಂಟೆಯ ವಿಮಾನ ಪ್ರಯಾಣ ಮಾಡಿ ವಿಂಬಲ್ಡನ್‌ಗೆ ತೆರಳಿದರೆ, ಅಲ್ಲಿ ಕೇವಲ 40 ನಿಮಿಷಗಳಲ್ಲಿ ಲಿಯಾಂಡರ್–ಪೇಸ್ ಆಟ ಮುಗಿಸಿ ಗೆಲುವಿನ ನಗೆ ಬೀರಿದ್ದರು!

ಸರಿಯಾಗಿ 25 ವರ್ಷಗಳ ಹಿಂದೆ ಇದೇ ವಿಂಬಲ್ಡನ್ ಕೋರ್ಟ್‌ನಲ್ಲಿ ಲಿಯಾಂಡರ್ ಮೊತ್ತ ಮೊದಲ ಬಾರಿಗೆ 'ವಿಂಬಲ್ಡನ್ ಜೂನಿಯರ್ ಕಪ್' ಗೆದ್ದಿದ್ದ! ಆಗಿನ್ನೂ ಈತ 16ರ ತರುಣ. ನಿರಂತರವಾಗಿ ಟೆನಿಸ್ ಆಡುತ್ತಾ ಪ್ರತಿವರ್ಷವೂ ಹೊಸ ವಿಜಯಗಳನ್ನು ದಾಖಲಿಸಿದ. ವೃತ್ತಿ ಜೀವನದ ಈ ಸುದೀರ್ಘ ಜೈತ್ರಯಾತ್ರೆಯಲ್ಲಿ ಲಿಯಾಂಡರ್ ಮೊನ್ನೆ ಗೆದ್ದದ್ದು 16ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. ಟೆನಿಸ್‌ನಲ್ಲಿ ಅಮೃತರಾಜ್ ಮತ್ತು ಕೃಷ್ಣನ್ ಸೋದರರು ಈ ಹಿಂದೆ ಅಷ್ಟೊಂದು ದಾಖಲೆಗಳನ್ನು ಮಾಡಿದ್ದರೂ, ಭಾರತದ ಪರವಾಗಿ ಲಿಯಾಂಡರ್ ವಿಶ್ವಸಾಧನೆಯೇ ಅತ್ಯುತ್ತಮವಾದದ್ದು. ಈತ ಗೆದ್ದ 16 ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಎಂಟು ಪುರುಷರ ಡಬಲ್ಸ್ ಪ್ರಶಸ್ತಿಗಳಾದರೆ, ಉಳಿದ ಎಂಟು ಮಿಕ್ಸೆಡ್ ಡಬಲ್ಸ್ ಪ್ರಶಸ್ತಿಗಳು. 1996ರಲ್ಲಿ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಟೆನಿಸ್ ಕಂಚು ತಂದುಕೊಟ್ಟಿದ್ದ ಲಿಯಾಂಡರ್, 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದರೆ ಅದು ಆತನ 7ನೇ ಒಲಿಂಪಿಕ್ಸ್ ಸ್ಪರ್ಧೆ ಆಗಲಿದೆ. ಭಾರತದ ಮಟ್ಟಿಗೆ ಅದೂ ಒಂದು ದಾಖಲೆಯೇ!

ಈ 25 ವರ್ಷಗಳಲ್ಲಿ ಲಿಯಾಂಡರ್ 100 ಪಾರ್ಟ್‌ನರ್‌ಗಳ ಜತೆಗೆ ಡಬಲ್ಸ್ ಮತ್ತು ಮಿಕ್ಸೆಡ್ ಡಬಲ್ಸ್ ಆಡಿದ್ದಾರೆ ಎನ್ನುವುದೂ ಕುತೂಹಲಕರ. ವಿಶ್ವ ಟೆನಿಸ್‌ನಲ್ಲಿ ಇದೇನೂ ಅಪರೂಪವಲ್ಲ. ಈ ರೀತಿ 100 ಪಾರ್ಟ್‌ನರ್‌ಗಳ ಜತೆಗೆ ಆಡಿದವರು ಇನ್ನೂ 46 ಆಟಗಾರರಿದ್ದಾರೆ. ಆದರೆ ಅಷ್ಟೂ ಜನರಲ್ಲಿ 50 ಪ್ರಶಸ್ತಿಗಳನ್ನು ಗೆದ್ದ ಇನ್ನೊಬ್ಬ ಆಟಗಾರ ವಿಶ್ವದಲ್ಲಿ ಯಾರೂ ಇಲ್ಲ. ಮಾತ್ರವಲ್ಲ ಪಾರ್ಟ್‌ನರ್‌ಗಳನ್ನು ಬದಲಾಯಿಸುತ್ತಲೇ 700 ಪಂದ್ಯಗಳಲ್ಲಿ ಗೆಲುವು ಸಾಧಿಸಿದವರೂ ಯಾರೂ ಇಲ್ಲ! ಮೊನ್ನೆ ವಿಂಬಲ್ಡನ್ ಗೆದ್ದ ಮಾರ್ಟಿನಾ ಹಿಂಗಿಸ್ ಜತೆಗೆ ಲಿಯಾಂಡರ್‌ಗೆ ಇದು ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. ಈ ಜೋಡಿ ಕಳೆದ ವರ್ಷ ಆಸ್ಟ್ರೇಲಿಯನ್ ಓಪನ್ ಮಿಕ್ಸೆಡ್ ಡಬಲ್ಸ್ ಪ್ರಶಸ್ತಿ ಕೂಡಾ ಗೆದ್ದಿದೆ.

ಲಿಯಾಂಡರ್ ಜತೆಗೆ ಪುರುಷರ ಡಬಲ್ಸ್‌ನಲ್ಲಿ ಅತ್ಯಂತ ಹೆಚ್ಚು ಪಂದ್ಯಗಳನ್ನು ಆಡಿದಾತ ಮಹೇಶ್ ಭೂಪತಿ. ಈ ಜೋಡಿ 1999ರಲ್ಲಿ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಎರಡೂ ಪ್ರಶಸ್ತಿಗಳನ್ನು ಗೆದ್ದುಕೊಂಡಿತ್ತು. 13 ವರ್ಷಗಳ ಅವಧಿಯಲ್ಲಿ ಮೂರು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದ ಹೆಗ್ಗಳಿಕೆ ಈ ಜೋಡಿಯದ್ದು. ಮಿಕ್ಸೆಡ್ ಡಬಲ್ಸ್‌ನಲ್ಲಿ ಈಗಾಗಲೆ 24 ಮಹಿಳೆಯರ ಜತೆಗೂಡಿ ಪೇಸ್ ಆಡಿದ್ದಾರೆ. ಡಬಲ್ಸ್‌ನಲ್ಲಿ ಪಾರ್ಟ್‌ನರ್ ಜತೆಗಿನ ಆಟದ ಹೊಂದಾಣಿಕೆ ಅತ್ಯಂತ ಮುಖ್ಯ. 1999ರಲ್ಲಿ ಈತ ರೇಮಂಡ್ ಜತೆ ಸೇರಿ ವಿಂಬಲ್ಡನ್ ಮಿಕ್ಸೆಡ್ ಡಬಲ್ಸ್ ಪ್ರಶಸ್ತಿ ಗೆದ್ದಾಗ ಆಕೆಯ ವಯಸ್ಸು ಕೇವಲ 25 ಆಗಿತ್ತು. ಅದೇ ಲಿಯಾಂಡರ್ 2011ರಲ್ಲಿ 47 ವರ್ಷ ವಯಸ್ಸಿನ ಮಾರ್ಟಿನಾ ನವ್ರಾಟಿಲೊವಾ ಜತೆ ಸೇರಿ ಮತ್ತೆ ವಿಂಬಲ್ಡನ್ ಪ್ರಶಸ್ತಿ ಗೆದ್ದರು. ಅಂದರೆ ಪಾರ್ಟ್‌ನರ್ ಯಾರೇ ಆದರೂ ಅವರ ಜತೆಗೆ ಅತ್ಯಂತ ವೇಗವಾಗಿ ಆಟದ ಹೊಂದಾಣಿಕೆ ಸಾಧಿಸುವ ಲಿಯಾಂಡರ್ ಗುಣವೇ ಅದ್ಭುತ!

ಟೆನಿಸ್ ಅಗಾಧ ದೈಹಿಕ ಶ್ರಮವನ್ನು ಬೇಡುವ ಆಟ. ಮೂರು ಸೆಟ್‌ಗಳ ಒಂದು ಟೆನಿಸ್ ಆಟವೆಂದರೆ, ಆರು ಸಲ ಮಿಲನಕ್ರಿಯೆ ನಡೆಸಿದಷ್ಟು ಶಕ್ತಿ ವ್ಯಯವಾಗುತ್ತದೆ ಎಂದು ಹಿಂದೊಮ್ಮೆ ಸಮೀಕ್ಷೆ ಪ್ರಕಟವಾಗಿತ್ತು. ಜತೆಗೆ ಕೆಲವೊಮ್ಮೆ ಒಂದೇ ಪಂದ್ಯ ನಾಲ್ಕು ತಾಸುಗಳಷ್ಟು ಸುದೀರ್ಘವಾಗಿ ನಡೆಯುವುದೂ ಉಂಟು. ಅಂತಹ ಸಂದರ್ಭಗಳಲ್ಲಿ ಮಾನಸಿಕ ದೃಢತೆಯೂ ಅಷ್ಟೇ ಮುಖ್ಯ. 43ರ ಬಳಿಕವೂ ದೈಹಿಕ ಕ್ಷಮತೆ ಮತ್ತು ಮಾನಸಿಕ ದೃಢತೆಯನ್ನು ಉಳಿಸಿಕೊಂಡಿರುವುದು ಲಿಯಾಂಡರ್ ಹೆಗ್ಗಳಿಕೆ.

ವೈಯಕ್ತಿಕ ಜೀವನದಲ್ಲಿ ಪೇಸ್ ಹಲವು ಏರು ಪೇರುಗಳನ್ನು ಕಂಡಿದ್ದರೂ, ಟೆನಿಸ್ ಕೋರ್ಟ್‌ನಲ್ಲಿ ಅದ್ಯಾವುದೂ ಈತನ ಏಕಾಗ್ರತೆಯನ್ನು ಭಂಗಗೊಳಿಸಿಲ್ಲ. ಬಾಳಗೆಳತಿ ರಿಯಾ ಪಿಳ್ಳೈ ಜತೆಗಿನ ಸಂಘರ್ಷ ಕೋರ್ಟು ಮೆಟ್ಟಿಲು ಹತ್ತಿದ್ದು, 9ರ ಹರೆಯದ ಮಗಳು ಅಯಾನಾಳ ಹೊಣೆಗಾರಿಕೆಯನ್ನು ಕೋರ್ಟ್ ಇತ್ತೀಚೆಗೆ ರಿಯಾಗೇ ವಹಿಸಿದೆ. 'ವಿಂಬಲ್ಡನ್ ಆಡುವಾಗ ನನ್ನ ಮಗಳು ಕುಳಿತು ಆಟ ನೋಡಬೇಕಿತ್ತು. ಆದರೆ ಆಕೆಯನ್ನು ಕರೆದುಕೊಂಡು ಬರಲು ಕೋರ್ಟ್ ಅನುಮತಿ ನೀಡಲಿಲ್ಲ' ಎಂದು ಪಂದ್ಯ ಗೆದ್ದ ಬಳಿಕ ಲಿಯಾಂಡರ್ ಹನಿಗಣ್ಣಾಗಿದ್ದ. ಖ್ಯಾತಿಯ ಉತ್ತುಂಗದಲ್ಲಿದ್ದಾಗ ಎರಡು ವರ್ಷಗಳ ಹಿಂದೆ ಈತನನ್ನು ಹೀರೊ ಮಾಡಿ 'ರಾಜಧಾನಿ ಎಕ್ಸ್‌ಪ್ರೆಸ್' ಎಂಬ ಹಿಂದಿ ಸಿನಿಮಾ ತೆಗೆದಿದ್ದರು. ಆದರೆ ಅದು ಸೂಪರ್ ಫ್ಲಾಪ್ ಆದದ್ದರಿಂದ ಟೆನಿಸ್‌ಗೆ ಒಳ್ಳೆಯದೇ ಆಗಿದೆ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65